# ಬಿ.ಪ್ಯಾಕ್‌ನಿಂದ ಬೆಂಗಳೂರು ಲೋಕಸಭಾ 2019 ಅಭ್ಯರ್ಥಿಗಳ ಅನುಮೋದನೆ

*ಬೆಂಗಳೂರು, ಭಾನುವಾರ ಎಪ್ರಿಲ್ 14, 2019:*

ಬೆಂಗಳೂರಿನಲ್ಲಿ ಉತ್ತಮ ಆಡಳಿತ ಮತ್ತು ಪ್ರತಿ ನಾಗರೀಕನ ಉತ್ತಮ ಜೀವನವನ್ನು ಬಯಸುವ ನಾಗರೀಕ ಸಂಸ್ಥೆ, ಬಿಪ್ಯಾಕ್ ಇಂದು ನಗರದ ಆರು ಲೋಕಸಭಾ ಅಭ್ಯರ್ಥಿಗಳನ್ನು ಬೆಂಬಲಿಸಿ ಅನುಮೋದಿಸಿದೆ.

ನಗರದ ಬೆಂಗಳೂರು ದಕ್ಷಿಣ, ಕೇಂದ್ರ ಮತ್ತು ಉತ್ತರ ಲೋಕಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿರುವ 78 ಅಭ್ಯರ್ಥಿಗಳಲ್ಲಿ 12 ಅಭ್ಯರ್ಥಿಗಳು ಬಿಪ್ಯಾಕ್‌ನ ಅಂತಿಮ ಪಟ್ಟಿಯಲ್ಲಿ ಸೇರಿದ್ದಾರೆ. ಆಯ್ಕೆಯಾದ ಅಭ್ಯರ್ಥಿಗಳು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾಗಿರುತ್ತಾರೆ.

ಅನುಮೋದನೆಗೆ ಆಯ್ಕೆಯಾದ ಅಭ್ಯರ್ಥಿಗಳು ಸುಧೀರ್ಘ ಮೌಲ್ಯಮಾಪನ ಕ್ರಿಯೆಗೆ ಒಳಪಟ್ಟಿದರು.

- ಬಿಪ್ಯಾಕ್ ಕೈಗೊಂಡ ಕ್ಷೇತ್ರ ಮತ್ತು ಪರಿಣತರ ಅಭಿಪ್ರಾಯ ಸಮೀಕ್ಷೆಯ ಮೂಲಕ ಸಂಸತ್ತಿನ ಸದಸ್ಯರ, ಕೇಂದ್ರ ಮತ್ತು ರಾಜ್ಯ ಸಚಿವರ, ವಿಧಾನ ಸಭೆ ಮತ್ತು ಪರಿಷತ್ ಸದಸ್ಯರ ಸಾಧನೆ
- ಆಸ್ತಿ ವಿವರ ಮತ್ತು ಯಾವುದೇ ಅಪರಾಧದ ದಾಖಲೆ (as per affidavits filed with the EC and search of publicly available information)
- ಬಿಪ್ಯಾಕ್ ಕೈಗೊಂಡ ಕ್ಷೇತ್ರ ಮೀಕ್ಷೆಯ ಮೂಲಕ ನಾಗರೀಕ ದೃಷ್ಟಿಕೋನಕ್ಕೆ ಬದ್ಧವಾಗಿ ತಮ್ಮ ಕ್ಷೇತ್ರದ ಸಾಮಾನ್ಯ ಸವಾಲುಗಳಿಗೆ ಸ್ಪಂಧನೆ (based on Constituency survey of 890 citizens in Bangalore)
- ಬಿಪ್ಯಾಕಿನ ಮೌಲ್ಯಮಾಪನ ಮಾನದಂಡ

ಹಲವು ಚರ್ಚೆಗಳ ಫಲವಾಗಿ ಸಮಿತಿಯು ಈ ಪಟ್ಟಿಯನ್ನು ರಚಿಸಿದೆ. ಅಳತೆಗೋಲುಗಳು ಹಲವಾರು ಇದ್ದು ರಾಜಕೀಯ ಅನುಭವ, ಸಂಸದೀಯ ದಕ್ಷತೆ, ಸ್ಥಳೀಯ ಸಾರ್ಮರ್ಥ್ಯ, ಸಾಮಾಜಿಕ ವಿಷಯಗಳಿಗೆ ಸ್ಪಂದನೆ, ಉತ್ತಮ ಆಡಳಿತಕ್ಕೆ ಬದ್ಧತೆ, ಬದಲಾವಣೆಯ ನೆಟ್ಟಿನಲ್ಲಿ ಆಲೋಚನೆ ಇವುಗಳು ಸೇರಿರುತ್ತವೆ. ಅಭ್ಯರ್ಥಿಗಳಾದ ಡಿ.ವಿ. ಸದಾನಂದ ಗೌಡ, ಪಿ.ಸಿ.ಮೋಹನ್, ಕೃಷ್ಣ ಬೈರೆ ಗೌಡ, ಬಿ. ಕೆ. ಹರಿ ಪ್ರಸಾದ್ ಮತ್ತು ರಿಜ್ವಾನ್ ಅರ್ಷದ್ ರಾಜಕೀಯ ಅನುಭವದಲ್ಲಿ ಮೇಲಿದ್ದಾರೆ ಮತ್ತು ಯುವಕರ ಆಕಾಂಕ್ಷೆಗಳನ್ನು ಪೂರೈಸುವ ಸಾಮರ್ಥ್ಯಕ್ಕಾಗಿ ತೇಜಸ್ವಿ ಸೂರ್ಯರನ್ನು ಪರಿಗಣಿಸಲಾಗಿದೆ.

ನಾಗರೀಕರು ತಮ್ಮ ನೆಚ್ಚಿನ ಅಭ್ಯರ್ಥಿಗಳನ್ನು ಬೆಂಬಲಿಸಿ ಮತ ಚಲಾಯಿಸಬೇಕೆಂದು ಬಿಪ್ಯಾಕ್ ಆಶೀಸುತ್ತದೆ.

ಕಳೆದ ವಿಧಾನ ಸಭಾ ಚುನಾವಣೆಯಲ್ಲಿ 29 ಅಭ್ಯರ್ಥಿಗಳನ್ನು ಅನುಮೋದಿಸಿತು. ಈ ಅನುಮೋದನೆಯಿಂದ ಮತದಾರರಿಗೆ ಯೋಗ್ಯ ಅಭ್ಯರ್ಥಿಗಳನ್ನು ಚುಣಾಯಿಸಲು ಸಹಾಯಕವಾಗಿದ್ದು ಉತ್ತಮ ಅಭ್ಯರ್ಥಿಗಳು ಕಣಕ್ಕೆ ಇಳಿಯಲು ಅವಕಾಶ ಕಲ್ಪಸಿದೆ.

## ಬಿ.ಪ್ಯಾಕ್ ಅನುಮೋದನೆ ಅಭ್ಯರ್ಥಿಗಳು

| ಲೋಕಸಭಾ ಕ್ಷೇತ್ರ | ಬಿ.ಪ್ಯಾಕ್ ಅನುಮೋದನೆ ಅಭ್ಯರ್ಥಿಗಳು | |
|---|---|---|
| 24 – ಬೆಂಗಳೂರು ಉತ್ತರ | ಡಿ.ವಿ. ಸದಾನಂದ ಗೌಡ | ಕೃಷ್ಣ ಬೈರೆ ಗೌಡ |
| 25- ಬೆಂಗಳೂರು ಕೇಂದ್ರ | ಪಿಸಿ ಮೋಹನ್ | ರಿಜ್ವಾನ್ ಅರ್ಷದ್ |
| 26- ಬೆಂಗಳೂರು ದಕ್ಷಿಣ | ತೇಜಸ್ವಿ ಸೂರ್ಯ | ಬಿ. ಕೆ. ಹರಿ ಪ್ರಸಾದ್ |